# ಜ್ಞಾನೋದಯದ ಇನ್ನೊಂದು ಪ್ರಸಂಗ

ಕರಾವಳಿ ತೀರದ ಒಂದು ಜಿಲ್ಲೆ. ಅಲ್ಲೊಂದು ಕನ್ನಡ ಸಾಹಿತ್ಯ ಪರಿಷತ್ತು. ಅದಕ್ಕೊಬ್ಬ ಅಧ್ಯಕ್ಷರು. ಅವರಿಗೆ ಕನ್ನಡದ ಬಗ್ಗೆ ವಿಪರೀತ ಅಕ್ಕರಾಸ್ಥೆ. 'ಕನ್ನಡದ ಮಕ್ಕಳೆಲ್ಲಾ ಒಂದಾಗಿ ಬನ್ನಿ, ಕನ್ನಡವನ್ನೇ ಓದಿ, ಕನ್ನಡ ಶಾಲೆಗಳಲ್ಲೇ ಓದಿ' ಎಂದು ಹೋರಾಟ ನಡೆಸಿದ ಚರಿತ್ರೆಯಿರುವ ಈ ಅಧ್ಯಕ್ಷರಿಗೆ, ಒಂದು ದಿನ ಬೆಂಗಳೂರನ್ನು ಕೇಂದ್ರವಾಗುಳ್ಳ 'ಕಸಾಪ'ದ ಅಧ್ಯಕ್ಷ ಗಾದಿ ಏರಬೇಕು ಎನ್ನುವುದು ಮನದಾಸೆ. ಅದಕ್ಕಾಗಿ ಚುನಾವಣಾ ತಯಾರಿಯೂ ತೆರೆಮರೆಯಲ್ಲಿ ನಡೆದಿದೆ. ಈವರೆಗಿನ ಕಥೆಯೆಲ್ಲವೂ ರಾಜಮಾರ್ಗದಲ್ಲೇ ನಡೆದಿರುವಂತಹದ್ದು, ಸರಿಯಾದುದು. ಈ ರಾಜಮಾರ್ಗದ ಪಯಣದಲ್ಲೊಂದು ತಿರುವು ಕಾಣಿಸಿಕೊಂಡಿದೆ ನೋಡಿ, ಅದುವೇ ಕಥೆಗೆ ಬೇರೆಯ ಆಯಾಮ ನೀಡಿದೆ.

ತಿರುವಿನಲ್ಲಿ ನಿಂತಿರುವ ಕಸಾಪ ಜಿಲ್ಲಾಧ್ಯಕ್ಷರು ಜ್ಞಾನೋದಯವೊಂದಕ್ಕೆ ಈಡಾದವರಂತೆ ಹೊಸ ಭಾಷಣ ಸಿದ್ಧಪಡಿಸಿಕೊಂಡಿದ್ದಾರೆ. ಆ ಭಾಷಣದ ಮುಖ್ಯಾಂಶ ಏನಪ್ಪಾ ಅಂದರೆ– "ಕನ್ನಡ ಶಾಲೆಗಳ ಸ್ಥಿತಿಗತಿ ಸರಿಯಾಗಿಲ್ಲ. ಆ ಶಾಲೆಗಳಲ್ಲಿ ಪ್ರತಿ ತರಗತಿಗೂ ಪ್ರತ್ಯೇಕ ಮೇಷ್ಟರುಗಳಿಲ್ಲ. ಹೀಗಾದರೆ ನಮ್ಮ ಮಕ್ಕಳು ಕಲಿಯುವುದು ಹೇಗೆ? ಸ್ಪರ್ಧಾತ್ಮಕ ಜಗತ್ತಿನಲ್ಲಿ ಮುಂದೆ ಬರುವುದು ಹೇಗೆ?..."

ಕನ್ನಡ ಶಾಲೆಗಳ ದಯನೀಯ ಸ್ಥಿತಿಯನ್ನು ಅಧ್ಯಕ್ಷರು ಅಷ್ಟೇ ದಯನೀಯವಾಗಿ ತಮಗೆ ಎದುರಾದವರಿಗೆಲ್ಲ ಅರ್ಥ ಮಾಡಿಸುತ್ತಿದ್ದಾರೆ. ಯಾವುದೇ ಕಾರ್ಯಕ್ರಮಕ್ಕೆ ಹೋದರೂ ತಮ್ಮ ಜ್ಞಾನೋದಯದ್ದೇ ನಿವೇದನೆ. ಸ್ಥಳೀಯ ಪತ್ರಿಕೆಗಳಲ್ಲೂ ಅದೇ ಸುದ್ದಿ. (ಬಹುಶಃ, ಇಂಥ ಸುದ್ದಿಗಳನ್ನೆಲ್ಲ ಕೇಳಿಯೇ ಮುಖ್ಯಮಂತ್ರಿ ಸದಾನಂದ ಗೌಡರು ಹಾಗೂ ಶಿಕ್ಷಣ ಸಚಿವ ವಿಶ್ವನಾಥ ಕಾಗೇರಿಯವರು ಕನ್ನಡ ಶಾಲೆಗಳಿಗೊಂದು ಗತಿ ಕಾಣಿಸಲು ಯೋಚಿಸಿರಬೇಕು). ಹೌದಲ್ಲವೇ, ಇದು ನಿಜವಲ್ಲವೇ... ಎಂದು ಅಧ್ಯಕ್ಷರ ಗೀತೆ ಬೋಧನೆಯಿಂದ ಕೆಲವರು ರೋಮಾಂಚಿತರಾಗಿರುವುದೂ ಇದೆ.

ಯೇಸುವಿರಲಿ, ಬುದ್ಧನಿರಲಿ, ಬಸವನಿರಲಿ, ಬಾಪುವಿರಲಿ– ಮಹಾತ್ಮರ ಮಾತನ್ನು ಅನುಮಾನಿಸುವವರು ಎಲ್ಲ ಕಾಲದೇಶಗಳಲ್ಲೂ ಇದ್ದರಷ್ಟೇ! ಅಂಥವರು ಈ ಕಲಿಯುಗ ವಿಪರೀತದ ಕಾಲದಲ್ಲಿ ಇಲ್ಲದೆ ಇರುವರೇ? ಆ ಅನುಮಾನ ವ್ಯಸನಿಗಳು, ಅಧ್ಯಕ್ಷರ ಮಾತಿನ ಜಾಡಿನ ಜುಟ್ಟು ಹಿಡಿದು ಅಲ್ಲಾಡಿಸಿದಾಗ ಬೆಳಕಿಗೆ ಬಂದಿರುವ ಇನ್ನೊಂದು ಸಂಗತಿಯೆಂದರೆ–

ಆ ಅಧ್ಯಕ್ಷರ ಮಕ್ಕಳೀಗ ವಯಸ್ಸಿಗೆ ಬಂದಿದ್ದಾರೆ! ಅರ್ಥಾತ್, 'ಕೇಜಿ' ಲೆಕ್ಕದಲ್ಲಿ ಅವರ ಶಾಲಾಪ್ರವೇಶಕ್ಕೆ ಮುಹೂರ್ತ ಒದಗಿಬರುತ್ತಿದೆ. ಇಂಥ ಸಂಕಟ ಸಂದರ್ಭಗಳಲ್ಲೇ ಅಲ್ಲವೇ ಜ್ಞಾನೋದಯ ಆಗುವುದು!

**-ಮಹತಿ**

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd.,Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@deccanherald.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68